(೨) ಮಂಗಳೂರಿನಲ್ಲಿ ಸಾರಿಗೆ ನಿಯಂತ್ರಣ ಮಾಡಲು ಪೋಲೀಸ್ ಸಿಬ್ಬಂದಿಯನ್ನು ಹೆಚ್ಚಿಸುವುದು

ಶ್ರೀ ಬ್ಲೇಸಿಯಸ್ ಡಿಸೋಜ.—ಮಾನ್ಯ ಅಧ್ಯಕ್ಷರೇ, ಮಂಗಳೂರು ನಗರದಲ್ಲಿ ಈಗ ಇರುವ ಸಾರಿಗೆ ನಿಯಂತ್ರಣ ಪೋಲೀಸ್ ಸಿಬ್ಬಂದಿಗಳ ಸಂಖ್ಯೆ ಬರೇ ೮೫ರಷ್ಟು. ನಗರದಲ್ಲಿ ಬಹಳಷ್ಟು ಅಪಘಾತಗಳಾಗುತ್ತಿವೆ. ಅದನ್ನು ನಿಯಂತ್ರಿಸಲು ಕನಿಷ್ಟ ೨೪೫ ಪೋಲೀಸರು ಆಗತ್ಯ ಎಂದು ಅಂದಾಜು ಮಾಡಲಾಗಿದೆ. ೩-೩-೧೯೮೬ನೇ ದಿನ ಮಾನ್ಯ ಗೃಹ ಸಚಿವರು, ಆಗತ್ಯವುಳ್ಳ ಸಿಬ್ಬಂದಿಗಳ ಸಂಖ್ಯೆ ಹೆಚ್ಚಿಸಿ ಒಂದು ವರ್ಷದೊಳಗೆ ನೇಮಕ ಮಾಡಲಾಗುವುದು ಎಂದು ಸದನದಲ್ಲಿ ಆಶ್ವಾಸನೆ ಕೊಟ್ಟಿದ್ದರು. ಈ ಭರವಸೆ ಇನ್ನೂ ಈಡೇರಿಲ್ಲ. ಬೇಕಾದ ಸಿಬ್ಬಂದಿಗಳನ್ನು ಯಾವಾಗ ನೇಮಿಸಲಾಗುವುದು ಎಂದು ಮತ್ತೊಮ್ಮೆ ಭರವಸೆ ಕೊಡಬೇಕಾಗಿಯೂ, ಭರವಸೆಯನ್ನು ಕೂಡಲೇ ಈಡೇರಿಸಬೇಕಾಗಿಯೂ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಬಗ್ಗೆ ಮಾನ್ಯ ಸದಸ್ಯರಿಗೆ ಮಾನ್ಯ ಗೃಹ ಸಚಿವರಿಂದ ಉತ್ತರ ಪನ್ನು ಒದಗಿಸಿಕೊಡುತ್ತೇನೆ.

(೩) ಬಾಗೇಪಲ್ಲಿಯ ಸರ್ಕಾರಿ ಪ್ರಾಥಮಿಕ ಶಾಲಾ ಹಿಂದಿ ಶಿಕ್ಷಕರಿಗೆ ಹೈದ್ರಾಬಾದ್ ವೇತನ ಶ್ರೇಣಿಯನ್ನು ನೀಡುವುದು

ಶ್ರೀ ಬಿ. ನಾರಾಯಣಸ್ವಾಮಿ.—ಮಾನ್ಯ ಅಧ್ಯಕ್ಷರೇ, ದಿನಾಂಕ ೨-೧೦-೮೬ರಂದು ಮಾನ್ಯ ಮಂತ್ರಿಗಳ ಸನ್ನಿಧಾನಕ್ಕೆ ನನ್ನ ಸ್ವಂತ ಕ್ಷೇತ್ರವಾದ ಬಾಗೇಪಲ್ಲಿಯ ಸರ್ಕಾರಿ ಪ್ರಾಥಮಿಕ ಶಾಲಾ ಹಿಂದೀ ಶಿಕ್ಷಕರ ಸಂಘದ ಮನವಿಯನ್ನು ಸಲ್ಲಿಸಿ ಸದರಿ ಪ್ರಾಥಮಿಕ ಹಿಂದೀ ಶಿಕ್ಷಕರಿಗೆ ಹೈದರಾಬಾದ್ ವೇತನ ಶ್ರೇಣಿಯನ್ನು ನೀಡುವಂತೆ ಒತ್ತಾಯಿಸಿ ಮನವಿ ಸಲ್ಲಿಸಿದ್ದೆ. ಆದರಂತೆ ದಿನಾಂಕ ೨೩-೧೦-೮೬ರಂದು ತಮ್ಮ ಪತ್ರವ ಕ್ರಮಸಂಖ್ಯೆ ನಂ. ಪಿ.ಎಂ. ೧೦೬೧, ಎಂ.ಎಸ್.ಎಲ್. (೧) ೮೬ರಂತೆ ತಾವು ಸಂಬಂಧಿಸಿದ ಕಾರ್ಯದರ್ಶಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದಂತೆ ತಿಳಿಸಿ ಸುಮಾರು ತಿಂಗಳುಗಳೇ ಆಗಿದ್ದರೂ, ಸದರಿ ಕಾರ್ಯದರ್ಶಿಯಿಂದ ಯಾವುದೇ ಕ್ರಮ ತೆಗೆದುಕೊಂಡ ಬಗ್ಗೆ ವಿವರಣೆ ಇರುವುದಿಲ್ಲ. ಕಾರಣವೇನು? ಈ ಬಗ್ಗೆ ತಮ್ಮಿಂದಲೇ ಮುಂದಿನ ಕ್ರಮವನ್ನು ತೆಗೆದುಕೊಳ್ಳುವಿರಾ ಎಂಬುದನ್ನು ಹೇಳಬೇಕು. ಈ ಬಗ್ಗೆ ತಮ್ಮ ಸಹಾನುಭೂತಿ ತೋರಿಸಿ ಆವರಿಗೆ ಹೈದರಾಬಾದ್ ವೇತನ ಶ್ರೇಣಿ ನೀಡುವಿರೆಂದು ಮತ್ತೊಮ್ಮೆ ತಮ್ಮನ್ನು ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ್ (ವಿದ್ಯಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಹೈದರಾಬಾದ್ ವೇತನ ಶ್ರೇಣಿಯನ್ನು ಸರ್ಕಾರೀ ಶಾಲೆಗಳಲ್ಲಿ ಕೆಲಸ ಮಾಡುವವರಿಗೆ ಕೊಟ್ಟಿದ್ದೇವೆ. ಖಾಸಗಿ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವವರಿಗೂ ಇದನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಆದರೆ ಅದು ಆಗುವುದಿಲ್ಲವೆಂದು ಹೇಳಿದ್ದೇವೆ.

(ಶ್ರೀ ವಸಂತ ಬಂಗೇರ ಅವರು ಗೈರು ಹಾಜರಾಗಿದ್ದಾರೆ)

(೪) ಕರ್ನಾಟಕದಾದ್ಯಂತ ಪೌರ ಕಾರ್ಮಿಕರು ಸ್ಟ್ರೈಕ್ ಮಾಡುತ್ತಿರುವುದು

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ಕರ್ನಾಟಕದಾದ್ಯಂತ ಪೌರ ಕಾರ್ಮಿಕರು ಸ್ಟ್ರೈಕ್ ಮಾಡಿರುವುದರಿಂದ ನಗರ ಪ್ರದೇಶಗಳೆಲ್ಲಾ ಕೊಳಚೆ ಪ್ರದೇಶಗಳಾಗಿವೆ. ಸರ್ಕಾರವ ಟ್ರೆಜರಿಯಿಂದ ಸಂಬಳ ಕೊಡಬೇಕು ಎಂದು ಮುಂತಾದ ನ್ಯಾಯವಾದ ಬೇಡಿಕೆಗಳಿವೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟು ಈಡೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಇಪತ್ತು ಇರತಕ್ಕಂಥಾದ್ದು ಮತ್ತು ಸನಗೆ ಬಂದಿರತಕ್ಕಂಥಾದ್ದು ಇದು. ಕರ್ನಾಟಕದಾದ್ಯಂತ ರಿಲೀಫ್ ಕೆಲಸಗಳಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರು ಸತ್ಯಾಗ್ರಹವನ್ನು ನಡೆಸುವ ಬಗ್ಗೆ ಎಂದು ಇದೆ. ಇದಕ್ಕೆ ಉತ್ತರ ಕೊಡುತ್ತೇನೆ.